ಇ) ಇದ್ದಲ್ಲಿ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :

ಅ) ಪ್ರಸ್ತುತ ವರ್ಷದಲ್ಲಿ ವಿಧಾನ ಸಭಾ ಕ್ಷೇತ್ರವಾರು ಮನೆಗಳನ್ನು ನೀಡಿರುವುದಿಲ್ಲ. ತಾಲ್ಲೂಕುವಾರು ಮನೆಗಳನ್ನು ಈ ಕೆಳಕಂಡಂತೆ ನೀಡಲಾಗಿದೆ.

ಕ್ರ. ಸಂ.	ತಾಲ್ಲೂಕು / ಪಟ್ಟಣ	ಗ್ರಾಮಾಂತರ	ನಗರ
1.	ಬಾಗೇಪಲ್ಲಿ	175	50
2.	ಬಂಗಾರಪೇಟೆ	175	100
3.	ಚಿಕ್ಕಬಳ್ಳಾಪುರ	175	100
4.	ಚಿಂತಾಮಣಿ	175	150
5.	ಗೌರಿಬಿದನೂರು	175	100
6.	ಗುಡಿಬಂಡೆ	150	50
7.	ಕೋಲಾರ	175	300
8.	ಮಾಲೂರು	175	100
9.	ರಾಬರ್‌ಸನ್ ಪೇಟೆ	-	150
10.	ಮುಳಬಾಗಿಲು	175	150
11.	ಶಿಡ್ಲಘಟ್ಟ	175	100
12.	ಶ್ರೀನಿವಾಸಪುರ	175	100

ಆ) ಪಟ್ಟಣ ಪ್ರದೇಶಗಳಿಗೆ ಮಾತ್ರ ರೂ.25,000 ರಿಂದ 30,000 ರೂ.ಗಳ ವರೆಗೆ ಹೆಚ್ಚಿಸಲಾಗಿದೆ. ಗ್ರಾಮೀಣ ಪ್ರದೇಶದ ಮನೆಗಳಿಗೆ ಪ್ರತಿ ಘಟಕಕ್ಕೆ ರೂ. 20,000ಗಳು ಮಾತ್ರ ಇರುತ್ತದೆ ಇದನ್ನು ರೂ.30,000-00ಕ್ಕೆ ಏರಿಸುವ ಉದ್ದೇಶವಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿರುವ ಕೊಳಚೆ ಪ್ರದೇಶಗಳು

1717 - ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಕೊಳಚೆ ಪ್ರದೇಶಗಳು ರಾಜ್ಯ ಕೊಳಚೆ ನಿರ್ಮೂಲನಾ ಮಂಡಳಿಯ ವ್ಯಾಪ್ತಿಯಲ್ಲಿವೆ? (ಜಿಲ್ಲಾವಾರು ಪೂರ್ಣ ವಿವರ ನೀಡುವುದು)

ಆ) ಇವುಗಳಲ್ಲಿ ಎಷ್ಟು ಕುಟುಂಬಗಳು ಮನೆಗಳನ್ನು ಗುರುತಿಸಲಾಗಿದೆ?

ಇ) *ಇವುಗಳಿಗೆ ಹಕ್ಕು ಪತ್ರವನ್ನು ಕೊಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ (ಗುರುತು ಚೀಟಿಯನ್ನು ಹೊರತುಪಡಿಸಿ)*

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :

ಅ) ರಾಜ್ಯದಲ್ಲಿ 1984 ಗುರುತಿಸಿದ ಕೊಳಚೆ ಪ್ರದೇಶಗಳಿದ್ದು ಈ ಪೈಕಿ 1364 ಕೊಳಚೆ ಪ್ರದೇಶಗಳು ಕಾಯಿದೆ ಅಡಿಯಲ್ಲಿ ಘೋಷಿತವಾಗಿದ್ದು, ಮಂಡಳಿಯ ಕಾರ್ಯವ್ಯಾಪ್ತಿಗೆ ಒಳಪಟ್ಟಿರುತ್ತವೆ. ಜಿಲ್ಲಾವಾರು ವಿವರಗಳನ್ನು ಅನುಬಂಧ - 1ರಲ್ಲಿ ಒದಗಿಸಿದೆ.

ಆ) ಗುರುತಿಸಿರುವ 1984 ಕೊಳಚೆ ಪ್ರದೇಶಗಳಲ್ಲಿ 3.68 ಲಕ್ಷ ಕುಟುಂಬಗಳಿರುವುದಾಗಿ ಅಂದಾಜು ಮಾಡಲಾಗಿದೆ.

ಇ) ಮಂಡಳಿಯು ಗುರುತಿಸಿರುವ ಎಲ್ಲಾ ಕೊಳಚೆ ಪ್ರದೇಶದ ಕುಟುಂಬಗಳಿಗೆ ಹಕ್ಕುಪತ್ರಗಳನ್ನು ನೀಡಲು ಮಂಡಳಿ ಕಾಯಿದೆಯಲ್ಲಿ ಅವಕಾಶವಿರುವುದಿಲ್ಲ. ಪುನರ್ ವಸತಿ ಯೋಜನೆ ಅಡಿಯಲ್ಲಿ ಮಂಡಳಿಯು ಹುಡ್ಕೋ ಸಂಸ್ಥೆಯ ಸಾಲದ ನೆರವಿನೊಡನೆ ಆರ್ಥಿಕ ದುರ್ಬಲ ವರ್ಗದ ಮನೆಗಳನ್ನು ಕಟ್ಟಿ ಹಂಚಿಕೆ ಮಾಡಲಾಗಿರುವ ಫಲಾನುಭವಿಗಳಿಗೆ ಮಾತ್ರ ಹಕ್ಕುಪತ್ರಗಳನ್ನು ನೀಡುವ ಕ್ರಮವನ್ನು ಅನುಸರಿಸಿಕೊಂಡು ಬರಲಾಗುತ್ತಿದೆ.

ಮಂಡಳಿಯು ಈವರೆಗೆ 20220 ಮನೆಗಳನ್ನು ಪೂರ್ಣಗೊಳಿಸಿದ್ದು, ಆ ಪೈಕಿ 13144 ಮನೆಗಳನ್ನು ನೈಜ ಫಲಾನುಭವಿಗಳಿಗೆ ಹಕ್ಕುಪತ್ರಗಳನ್ನು ವಿತರಣೆ ಮಾಡಲಾಗಿದೆ.

ಅನುಬಂಧ - 1

1998ರ ಮಾರ್ಚ್ ಅಂತ್ಯಕ್ಕೆ ಜಿಲ್ಲಾವಾರು ಗುರುತಿಸಿದ ಘೋಷಿತ ಕೊಳಚೆ ಪ್ರದೇಶಗಳ ಹಾಗೂ ಜನಸಂಖ್ಯೆಯ ವಿವರ.

ಕ್ರ.ಸಂ.	ಜಿಲ್ಲೆಯ ಹೆಸರು	ಒಟ್ಟು ಕೊಳಚೆ ಪ್ರದೇಶದ ಸಂಖ್ಯೆ	ಘೋಷಿತ ಕೊಳಚೆ ಪ್ರದೇಶ ಸಂಖ್ಯೆ	ಜನಸಂಖ್ಯೆ ಒಟ್ಟು
1	2	3	4	5
1.	ಬೆಂಗಳೂರು ನಗರ	344	170	562033
2.	ಬೆಂಗಳೂರು ಗ್ರಾಮಾಂತರ	62	53	30921
3.	ಬಳ್ಳಾರಿ	130	86	82332
4.	ಬೀದರ್	69	36	54766
5.	ಬೆಳಗಾಂ	80	51	824667
6.	ಬಿಜಾಪುರ	161	92	211087
7.	ಚಿಕ್ಕಮಗಳೂರು	52	45	21657
8.	ಚಿತ್ರದುರ್ಗ	78	66	70992
9.	ದಕ್ಷಿಣ ಕನ್ನಡ	30	19	7381
10.	ಧಾರವಾಡ	182	134	129809
11.	ಗುಲ್ಬರ್ಗಾ	111	61	106250
12.	ಹಾಸನ	61	59	35536
13.	ಕೊಡಗು	3	3	844
14.	ಕೋಲಾರ	71	59	56583
15.	ಮೈಸೂರು	100	69	62966
16.	ಮಂಡ್ಯ	59	47	32611
17.	ರಾಯಚೂರು	120	83	110022
18.	ಶಿವಮೊಗ್ಗ	144	112	99586
19.	ತುಮಕೂರು	77	58	54341
20.	ಉತ್ತರ ಕನ್ನಡ	50	31	13255
	ಒಟ್ಟು	**1984**	**1364**	**1835439**